# ಎಪ್ಪತ್ತನಾಲ್ಕರ ಮಳೆಗಾಲ!

ಎಚ್.ಎಸ್. ವೆಂಕಟೇಶಮೂರ್ತಿ ಕನ್ನಡದ ಹಿರಿಯ ಕವಿ. 'ಹಸಿರು ರಿಬ್ಬನ್' ಮೂಲಕ ಅವರು ಸಿನಿಮಾ ನಿರ್ದೇಶಕರಾಗಿದ್ದಾರೆ. ದೃಶ್ಯಭಾಷೆಯ ಜೊತೆಗಿನ ತಮ್ಮ ಅನುಭವಗಳ ಕುರಿತು ಚಿತ್ರಸುಧಾ ಜೊತೆ ಮಾತನಾಡಿದ್ದಾರೆ.

■ ರಘು



★ ಸಿನಿಮಾ ನಿರ್ದೇಶನದಲ್ಲಿ ನಿಮಗಾದ ಮುಖ್ಯ ಅನುಭವ ಯಾವುದು?

ಕುರ್ಚಿಯ ಮೇಲೆ ಕುಳಿತು ಕವಿತೆ ಕಟ್ಟುವುದು ಬೇರೆ. ಕ್ಯಾಮೆರಾದ ಹಿಂದೆ ಓಡುವುದು ಬೇರೆ. ಸಿನಿಮಾ ಮಾಧ್ಯಮ ದೈಹಿಕ ಶ್ರಮವನ್ನು ಹೆಚ್ಚು ಬೇಡುತ್ತದೆ. ಅದು ಸಂತೆಯ ನಡುವೆ ನಡೆಯುವ ಪ್ರಕ್ರಿಯೆ. ಒಂದು ತಂಡದ ಜೊತೆ ಕೆಲಸ ಮಾಡುವಾಗ ಹೊಂದಾಣಿಕೆ ಬಹಳ ಕಷ್ಟವಾದುದು. 'ಹಸಿರು ರಿಬ್ಬನ್' ಚಿತ್ರದ ನಿರ್ದೇಶನ ನನ್ನ ತಾಳ್ಮೆಯನ್ನು ಇನ್ನಷ್ಟು ಹೆಚ್ಚಿಸಿತು.

★ ಸಾಹಿತ್ಯದ ವಿದ್ಯಾರ್ಥಿಯಾದ ನಿಮಗೆ ಸಿನಿಮಾ ಭಾಷೆಯ ಜೊತೆ ವ್ಯವಹರಿಸಿದ್ದು ಹೇಗನ್ನಿಸಿತು?

ಕಾವ್ಯದ ಯಶಸ್ಸಿನಲ್ಲಿ ಭಾಷೆಯ ಅರ್ಥ ಮತ್ತು ನಾದ ಬಹಳ ಮುಖ್ಯವಾದುದು. ಆದರೆ ಸಿನಿಮಾದಲ್ಲಿ ಭಾಷೆ ಆನುಷಂಗಿಕವಾದುದು. ಇಲ್ಲಿ ಮೌನಕ್ಕೆ ಹೆಚ್ಚು ಒತ್ತು. ದೃಶ್ಯದ ಸಂಯೋಜನೆಗೆ ಆದ್ಯತೆ. 'ಮಗು ಮಾದರಿಯ ಕ್ಯಾಮೆರಾ ಕಣ್ಣು' ಎಂದು ಗೋಪಾಲಕೃಷ್ಣ ಅಡಿಗರು ಹೇಳುತ್ತಾರೆ. ಮಗುವಿನ ಮುಗ್ಧತೆಯಲ್ಲಿ ಅನುಭವಗಳನ್ನು ದೃಶ್ಯವಾಗಿ ಕಟ್ಟಿಕೊಡುವುದು ಒಂದು ಅದ್ಭುತ. 'ಹಸಿರು ರಿಬ್ಬನ್'ನಲ್ಲಿ ಸಿನಿಮಾದ ವ್ಯಾಕರಣವನ್ನು ಹಿಡಿಯಲು ಪ್ರಯತ್ನಿಸಿದ್ದೇವೆ. ಸ್ವಾಮಿ ಅವರ ಛಾಯಾಗ್ರಹಣ ಸೊಗಸಾಗಿದೆ. ಉಪಾಸನಾ ಮೋಹನ್ ಉತ್ತಮ ಸಂಗೀತ ನೀಡಿದ್ದಾರೆ. ಮೋಹನ್ ಇದೇ ಮೊದಲ ಬಾರಿಗೆ ಸಿನಿಮಾಕ್ಕೆ ಸಂಗೀತ ನೀಡಿದ್ದಾರೆ.

ಸಿನಿಮಾ ಬಗ್ಗೆ ನನಗೆ ಮೊದಲಿನಿಂದಲೂ ಹುಚ್ಚು. ಬಾಲ್ಯದಲ್ಲಿ ಏಳೆಂಟು ಕಿ.ಮೀ. ದೂರದ ಊರಿಗೆ ಗಾಡಿ ಕಟ್ಟಿಕೊಂಡು ಟೆಂಟ್ ಸಿನಿಮಾಕ್ಕೆ ಹೋಗುತ್ತಿದ್ದ ದಿನಗಳಿಂದಲೂ ಇರುವ ಆಕರ್ಷಣೆಯದು. ವಿಶ್ವದ ಅತ್ಯುತ್ತಮ ಸಿನಿಮಾಗಳನ್ನು ನೋಡಿರುವೆ. ಇವೆಲ್ಲ ನೋಟದ ಅನುಭವಗಳು ಸಿನಿಮಾ ಮಾಡುವಾಗ ನೆರವಿಗೆ ಬಂದಿವೆ.



★ ಸಿನಿಮಾ ನಿರ್ದೇಶನದಲ್ಲಿ ಮುಂದುವರೆಯುವಿರಾ?

ಕವಿಯಾಗಿ ಭಾಷೆಯೊಂದನ್ನು ಒಲಿಸಿಕೊಳ್ಳಲು 60 ವರ್ಷಗಳಿಂದ ನಿರಂತರ ಸಾಧನೆಯಲ್ಲಿ ತೊಡಗಿದ್ದೇನೆ. ಈಗ ಸಿನಿಮಾ ಭಾಷೆಯನ್ನು ದಕ್ಕಿಸಿಕೊಳ್ಳುವುದು ಒಂದು ಸವಾಲು. ಸಿನಿಮಾ ಮಾಧ್ಯಮದ ಕುರಿತ ಕುತೂಹಲ, ಹುಚ್ಚು ಹಾಗೂ ಆಸಕ್ತಿಯಿಂದಾಗಿ 'ಹಸಿರು ರಿಬ್ಬನ್' ಮಾಡಿದ್ದು. ಎಪ್ಪತ್ತನಾಲ್ಕರ ವಯಸ್ಸಿನಲ್ಲಿ ಮತ್ತೆ ಅಂತಹದ್ದೊಂದು ಸಾಹಸ ಕಷ್ಟ. ಬರವಣಿಗೆಯೇ ಸಾಕಷ್ಟಿದೆ. ಕುಮಾರವ್ಯಾಸನ ಬಗ್ಗೆ ಬರೆಯುವುದು ಸಾಕಷ್ಟಿದೆ. ಬುದ್ಧನ ಕುರಿತು ಕಾವ್ಯ ರಚಿಸುವುದು ಬಾಕಿಯಿದೆ.

★ ನಿರ್ದೇಶನದ ಜೊತೆಗೆ ನಟನೆಯ ಅನುಭವಕ್ಕೂ ತಮ್ಮನ್ನು ಒಡ್ಡಿಕೊಂಡಂತಿದೆ.

ವೃದ್ಧರ ಕಥೆಯನ್ನೊಳಗೊಂಡ 'ಅಮೃತವಾಹಿನಿ' ಎನ್ನುವ ಚಿತ್ರದಲ್ಲಿ ನಟಿಸಿದ್ದೇನೆ. ಚಿತ್ರೀಕರಣ ಮುಗಿದಿದೆ. ಕಥೆಗಾರ ರಾಘವೇಂದ್ರ ಪಾಟೀಲರ ಕಥೆಯನ್ನು ಆಧರಿಸಿದ ಈ ಸಿನಿಮಾ ತರುಣ ತಲೆಮಾರು ಮತ್ತು ಹಿರಿಯ ನಾಗರಿಕರ ನಡುವಿನ ಹೊಂದಾಣಿಕೆಯ ಸವಾಲು–ಸಮಸ್ಯೆಗಳ ಕುರಿತು ಚರ್ಚಿಸುತ್ತದೆ. ಚಿತ್ರದ ಕಥೆಯ ಕೇಂದ್ರದಲ್ಲಿ ನನ್ನ ಪಾತ್ರವಿರುತ್ತದೆ. ಪಲ್ಲಕ್ಕಿ ಚಿತ್ರವನ್ನು ನಿರ್ದೇಶಿಸಿದ ನರೇಂದ್ರಬಾಬು ಈ ಚಿತ್ರದ ನಿರ್ದೇಶಕರು.

★ 'ಹಸಿರು ರಿಬ್ಬನ್' ಚಿತ್ರ ಏನನ್ನು ಹೇಳುತ್ತದೆ?

ನನ್ನ 'ಅನಾತ್ಮ ಕಥನ' ಕೃತಿಯ ಒಂದು ಭಾಗವನ್ನು 'ಹಸಿರು ರಿಬ್ಬನ್' ಚಿತ್ರದಲ್ಲಿ ಅಳವಡಿಸಿದ್ದೇನೆ. ಇದೊಂದು ಸರಳವಾದ, ಸುಂದರವಾದ ಹಾಗೂ ಸೂಕ್ಷ್ಮವಾದ ಕಥೆ. ಮುಗ್ಧ ಕುಟುಂಬವೊಂದರ ತಳಮಳ, ತಲ್ಲಣಗಳ ಕಥೆ ಚಿತ್ರದಲ್ಲಿದೆ. ನಿಖಿಲ್ ಮಂಜೂ, ಗಿರೀಶ್ ಲೋಕೇಶ್ ಹಾಗೂ ಬೇಬಿ ಋತ್ವಿ ಮುಖ್ಯಪಾತ್ರಗಳಲ್ಲಿ ನಟಿಸಿದ್ದಾರೆ.

■ ರಘು